ಸುಮಾರು ಎರಡು ಗಂಟೆ ರಾತ್ರಿ ಇರಬಹುದು, ಗಡದ್ದಾಗಿ ಮಲಗಿದ್ದ ಶೇಷಗಿರಿಗೆ ಇದ್ದಕ್ಕಿದ್ದ ಹಾಗೆ ಎಚ್ಚರವಾಯಿತು. ಧಡಕ್ಕನೆ ಹಾಸಿಗೆಯ ಮೇಲೆ ಎದ್ದು ಕುಳಿತ ಶೇಷಗಿರಿಗೆ ಯಾರೋ ಕಿವಿಯಲ್ಲಿ ಸ್ಪಷ್ಟವಾಗಿ ಪಿಸುಗುಟ್ಟಿದ ಹಾಗೆ. ಬೆಡ್‌ರೂಮಿನಲ್ಲಿ ಹೇಳಿಕೊಳ್ಳುವ ಕತ್ತಲೆಯೇನಿರಲಿಲ್ಲ. ಆಚೀಚೆಯ ಬೆಳಕು ಅಷ್ಟಿಷ್ಟು ಅವನ ಬೆಡ್‌ರೂಮಿಗೆ ಸಾಕಷ್ಟು ಹೊಳಪು ಕೊಡುವಂತಿತ್ತು. ಮೊನ್ನೆ ಮೊನ್ನೆಯ ವರೆಗೂ ಶೇಷಗಿರಿ ಕಿಟಕಿ ಬಾಗಿಲುಗಳನ್ನೆಲ್ಲ ತೆರೆದಿಟ್ಟೇ ಮಲಗುತ್ತಿದ್ದವನು. ಆದರೆ ಈಚೆಗೆ ವಿಪರೀತವಾಗಿಬಿಟ್ಟ ನಾಯಿಗಳ ಬೊಗಳುವಿಕೆಯಿಂದ ಅಪರಾತ್ರಿಯಲ್ಲಿ ನಿದ್ದೆ ಕೆಡುತ್ತದೆ ಎಂದು ಎಲ್ಲಾ ಕಿಟಕಿ ಮುಚ್ಚುತ್ತಿದ್ದ. ಈ ನಾಯಿಗಳ ಬೊಗಳುವಿಕೆ ಎಷ್ಟು ತೀವ್ರವಾಗಿತ್ತೆಂದರೆ ಎಂಥವರೂ ನಿದ್ದೆಯಿಂದೆದ್ದು ಕೂರಬೇಕು, ಹಾಗೆ. ಅವನೊಮ್ಮೆ ಇದನ್ನು ದಿನಸಿ ವ್ಯಾಪಾರಿ ಶೆಣೈಮಾಮರೊಂದಿಗೂ ಹೇಳಿಕೊಂಡಿದ್ದಿದೆ. ಅದಕ್ಕವರು ಗುಟ್ಟು ಹೇಳುವವರ ಹಾಗೆ "ಅಯ್ಯೊ ಮಾರಾಯ್ರೆ, ನಿಮ್ಗೆ ವಿಷಯ ಗೊತ್ತಿಲ್ವ ಹಾಗಾದ್ರೆ, ಮೊನ್ನೆ ಮೊನ್ನೆ ಟೀವಿಯಲ್ಲಿ ತೋರಿಸಿದ್ರಲ್ಲ ಮಾರಾಯ್ರೆ, ಮಂಗಳೂರಿನಲ್ಲಿ ಒಂದು ವಿಚಿತ್ರ ಹೆಂಗಸು ರಾತ್ರಿಯೆಲ್ಲ ತಿರುಗ್ತಾ ಉಂಟು, ನೋಡ್ತ ನೋಡ್ತ ಫಕ್ಕನೆ ಮಾಯವಾಗಿ ಬಿಡ್ತಾಳೆ, ಒಬ್ಬಳೇ ತಿರುಗ್ತಾಳೆ ಅಂತೆಲ್ಲ, ನೀವು ನೋಡುದಿಲ್ವ ಅದನ್ನೆಲ್ಲ? ಅದು ಇದೇ ಸುದ್ದಿ, ಗೊತ್ತಾಯಿತಲ್ವ. ಹನ್ನೆರಡು ವರ್ಷಕ್ಕೊಮ್ಮೆ ನಮ್ಮ ದುರ್ಗಿ ಊರು ಸುತ್ತುವುದು ಅಂತ ಉಂಟು ಮಾರಾಯ್ರೆ. ಅದು ದುರ್ಗಿಯಮ್ಮನೇ, ಗೊತ್ತಾಯ್ತಲ್ವ ನಿಮ್ಗೆ? ಈ ನಾಯಿಗಳಿಗೆಲ್ಲ ಅದು ಗೊತ್ತಾಗ್ತದೆ ಬಿಡಿ, ನಮ್ಗೆ ನಿಮ್ಗೆ ಕಣ್ಣಿಗೆ ಕಾಣುವುದಿಲ್ಲ ಅಷ್ಟೆ. ಅದ್ಕೆ ಬೊಗಳುವುದು ಅವು. ನೀವು ಹೆದರ್ಲಿಕ್ಕೆ ಎಂತದಿಲ್ಲ, ಗೊತ್ತಾಯ್ತಲ್ಲ ನಿಮ್ಗೆ. ಬಾಗಿಲು ಗಟ್ಟಿ ಹಾಕ್ಕೊಂಡು ಮಲಗಿ ಮಾರಾಯ್ರೆ..."ಎಂದಿದ್ದರು.

ಬೋಳು ಮೈಯಲ್ಲಿ ಹಾಸಿಗೆ ಮೇಲೆ ಎದ್ದು ಕೂತ ಶೇಷಗಿರಿಗೆ ಇದೆಲ್ಲ ನೆನಪಾಗಲಿಲ್ಲ. ಒಂದೆರಡು ಸಲ ಮತ್ತೇನಾದರೂ ಕೇಳಿಸ್ತದಾ ಅಂತ ಸ್ವಲ್ಪ ಕಿವಿಯಗಲಿಸಿದ. ಸುತ್ತುವ ಫ್ಯಾನಿನ ಸದ್ದು ಬಿಟ್ಟರೆ ಬೇರೇನೂ ಕೇಳಲಿಲ್ಲ. ಮತ್ತೆ ಅಲ್ಲಿಯೇ ಬಿದ್ದುಕೊಂಡು ಗೊರಕೆ ಹೊಡೆಯತೊಡಗಿದ ಅಷ್ಟೆ. ಆದರೆ ಇದೆಲ್ಲ ಮತ್ತೆ ಶೇಷಗಿರಿಗೆ ನೆನಪಾಗುವಂಥ ಘಟನೆಯೊಂದು ನೂರು ಮೀಟರ್ ಅಂತರದಲ್ಲೇ ಆವತ್ತು ರಾತ್ರಿ ನಡೆದಿತ್ತು.

ಅದು ದೀಪಾವಳಿಯ ಮರುದಿನ. ಶೇಷಗಿರಿಗೆ ಆವತ್ತು ರಜೆ ಇರಲಿಲ್ಲ, ಆಫೀಸಿಗೆ ಹೋಗಲಿಕ್ಕಿತ್ತು.

ಶೇಷಗಿರಿ ಬೆಳಿಗ್ಗೆ ಐದೂಕಾಲಿಗೆ ಏಳುತ್ತಾನೆ. ಆಫೀಸಿಗೆ ರಜೆಯಿದ್ದ ದಿನ ಕೂಡ ಅವನು ಏಳುವುದು ಐದೂಕಾಲಿಗೇ. ಹಾಗಂತ ಅವನೇನೂ ಅಲ್ರಾಂ ಇಟ್ಟು ಏಳುವುದಿಲ್ಲ. ಅವನ ಫ್ಲ್ಯಾಟಿನ ಪಕ್ಕದಲ್ಲೇ ಒಂದು ಕಲ್ಯಾಣ ಮಂಟಪ, ಅಂದರೆ ಮದುವೆ ಹಾಲ್ ಇದೆ. ಅಲ್ಲಿ ಒಂದು ಭಾಗದಲ್ಲಿ ಯೋಗದವರು ಬೆಳ್ಳಂಬೆಳಿಗ್ಗೆ ಐದು ಗಂಟೆಗೇ ಬಂದು ಗಡಗಡಗಡ ಶಟರ್ ಎತ್ತಿ, ಜೋಡಿಸಿಟ್ಟ ಕುರ್ಚಿಗಳನ್ನೆಲ್ಲ ಧಡಬಡ ಸರಿಸಿ ಜಮಖಾನ ಹಾಸಿ, ಓಂ ಸಹಾನವವತು... ಶಾಂತಿಃ ಶಾಂತಿಃ ಶಾಂತಿಃ ಎಂದು, ಎಂಥವರೂ ಎದ್ದು ಕೂರಬೇಕು, ಅಷ್ಟು ಗದ್ದಲವೆಬ್ಬಿಸಿ ಬಿಡುತ್ತಾರೆ. ಅದೇ ಹಾಲಿನ ಇನ್ನೊಂದು ಪಾರ್ಶ್ವವನ್ನು ಇನ್ನೊಂದು ಸ್ವಾಮಿಗಳ ಬಳಗದವರು ವಹಿಸಿಕೊಂಡಿದ್ದಾರೆ. ಅವರಿಗೂ ಇವರಿಗೂ ಒಂಥರಾ ಕಾಂಪಿಟೀಶನ್ನು. ಇವರು ಯಾವ ರೀತಿ ಮೂಗು ಅರಳಿಸಿ ಶ್ವಾಸ ತೆಗೆದುಕೊಳ್ಳುತ್ತಾರೆ ಅಂದರೆ ಇಡೀ ಊರಿನ ಕಸವನ್ನೆಲ್ಲ ಸೋ... ಹಂ ಅಂತ ಉಸಿರಿನಲ್ಲೇ ಎಳೆದುಕೊಳ್ಳುವ ವ್ಯಾಕ್ಯೂಂ ಕ್ಲೀನರುಗಳಂತೆ ಉಸಿರಾಡುತ್ತಾರೆ. ಇದೊಂಥರಾ ಸ್ವಚ್ಛತಾ